1 ಡೈನಮೋ ಥೇಮ್ಸ್ ನದಿಯ ಮೇಲೆ ನಡೆಯುತ್ತಿರುವ ದೃಶ್ಯ



# ನೀರಿನ ಮೇಲೆ ನಡೆಯಬಹುದೆ?

**ಮನುಷ್ಯ ಸಹಜವಾಗಿ ನೀರಿನ ಮೇಲೆ ನಡೆಯಲಾರ. 'ಡೆಡ್ ಸೀ'ಯಲ್ಲಿ ಅದು ಹೇಗೆ ನೀರಿನ ಮೇಲೆ ತೇಲುತ್ತಾನೆ?**

■ ಎಂ. ಅಬ್ದುಲ್ ರೆಹಮಾನ್ ಪಾಷ

ನೀರಿನ ಮೇಲೆ ನಡೆಯಲು ಸಾಧ್ಯವೇ? ಸಾಧ್ಯ. ಏಸು ಕ್ರಿಸ್ತರು ಸಮುದ್ರದ ಮೇಲೆ ನಡೆದಿದ್ದರು. ಅಕ್ಷಯ ಪಾತ್ರೆಯಿಂದ ಐದು ಸಾವಿರ ಜನರಿಗೆ ಉಣ ಬಡಿಸಿದ ಪವಾಡದ ನಂತರ ಈ ಸಂಗತಿ ನಡೆಯುತ್ತದೆ. ಏಸು ತಮ್ಮ ಅನುಯಾಯಿಗಳನ್ನೆಲ್ಲಾ ಹಡಗಿನಲ್ಲಿ ಗೆಲಿಲಿ ಸರೋವರದ ಇನ್ನೊಂದು ಬದಿಗೆ ಕಳಿಸಿ ಪ್ರಾರ್ಥನೆ ಮಾಡುವ ಸಲುವಾಗಿ ಅಲ್ಲಿಯೇ ನಿಲ್ಲುತ್ತಾರೆ. ರಾತ್ರಿಯಾದಂತೆ ಬಿರುಗಾಳಿ ಹೆಚ್ಚಿ ಹಡಗಿನಲ್ಲಿದ್ದವರು ಕಂಗಾಲಾಗುತ್ತಾರೆ. ಆಗ ಯೇಸು ಅವರ ಕಡೆಗೆ ನೀರಿನ ಮೇಲೆ ನಡೆದುಕೊಂಡು ಬರುವುದನ್ನು ಅವರು ಕಾಣುತ್ತಾರೆ. ಹೊಸ ಒಡಂಬಂಡಿಕೆಯಲ್ಲಿನ ಮ್ಯಾಥ್ಯು, ಮಾರ್ಕ್ ಮತ್ತು ಜಾನ್‌ರ ಸುವಾರ್ತೆಗಳಲ್ಲಿ ಈ ಘಟನೆ ನಿರೂಪಿತವಾಗಿದೆ. ಇದು ಲ್ಯೂಕ್‌ರ ಸುವಾರ್ತೆಯಲ್ಲಿ ಕಾಣಿಸುವುದಿಲ್ಲ.

ನಾವು ನಡೆಸುವ ವೈಜ್ಞಾನಿಕ ಮನೋವೃತ್ತಿ ಸಂಚಾಲಕರ ಸಬಲೀಕರಣ ಶಿಬಿರದಲ್ಲಿ ನಾನೊಮ್ಮೆ ಹೀಗೆ ಚಾಲೆಂಜ್ ಮಾಡಿದೆ– 'ನೀರಿನ ಮೇಲೆ ನಡೆದು ತೋರಿಸುತ್ತೇನೆ' ಎಂದು. ಶಿಬಿರಾರ್ಥಿಗಳು 'ಸಾಧ್ಯವೇ ಇಲ್ಲ' ಎಂದರು. ನಾನು ಸರಿ ಎಂದು, ಟೇಬಲ್ ಮೇಲಿದ್ದ ಲೋಟದಲ್ಲಿದ್ದ ನೀರನ್ನು ನೆಲದ ಮೇಲೆ ಚೆಲ್ಲಿ, ಅದರ ಮೇಲೆ ಹೆಜ್ಜೆ ಹಾಕಿ ನಡೆದೆ. ನೀರಿನ ಮೇಲೆ ನಡೆದಂತಾಗಲಿಲ್ಲವೇ! ಇಲ್ಲ, ಇದು ಬರೀ ಮಾತಿನ ಜಾಣತನ, ಅಷ್ಟೆ.

ಮನುಷ್ಯ ನೀರಿನ ಮೇಲೆ ನಡೆಯಲು ಸಾಧ್ಯವೇ? ನೀರಿನ ಮೇಲೆ ನಡೆಯುವುದು ಏನೂ ಅಲ್ಲ ಬಿಡಿ, ಮನುಷ್ಯ ಗಾವುದಗಟ್ಟಲೇ ದೂರಕ್ಕೆ ನೆಗೆಯ ಬಲ್ಲ; ಬೆಟ್ಟವನ್ನು ಕಿರುಬೆರಳಿನ ಮೇಲೆ ಎತ್ತಬಲ್ಲ; ಪುಟ್ಟ ರೆಕ್ಕೆಗಳ ಪುಷ್ಪಕ ವಿಮಾನದಲ್ಲಿ ಆಕಾಶದಲ್ಲಿ ಪಯಣಿಸಬಲ್ಲ. ಇದೆಲ್ಲವೂ ಸಾಧ್ಯ. ವಾಸ್ತವದಲ್ಲಿ ಅಲ್ಲ, ಪುರಾಣ, ದಂತಕಥೆ, ಅದ್ಭುತರಮ್ಯ, ಜನಪದ ಕಥೆಗಳಲ್ಲಿ ಇವೆಲ್ಲವೂ ಸಾಧ್ಯ.

ಆದರೆ ವಾಸ್ತವದಲ್ಲಿ ಮಾತ್ರ ಪ್ರತಿಯೊಂದು ಕ್ರಿಯೆಯೂ ಕೆಲವು ವಿಶ್ವ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅದರ ಪ್ರಕಾರ, ನೀರಿನ ಸಾಂದ್ರತೆಗಿಂತ ಮನುಷ್ಯನ ದೇಹದ ಸಾಂದ್ರತೆ ಹೆಚ್ಚಾಗಿರುವುದರಿಂದ ಮತ್ತು ಎರಡು ಪಾದಗಳ ಕೆಲವೇ ಕೆಲವು ಚದರ ಅಂಗುಲದಷ್ಟು ವಿಸ್ತೀರ್ಣದ ಮೇಲೆ ಸುಮಾರು 80ರಿಂದ 90 ಕೆ.ಜಿ. ತೂಕ ಬೀಳಿಸುತ್ತಾ ಮನುಷ್ಯ ಖಂಡಿತವಾಗಿ ನೀರಿನ ಮೇಲೆ ನಡೆಯಲಾರ.

ಆದರೂ ಇಲ್ಲಿ ನೋಡಿ, ಡೈನಮೋ ಎಂದೇ ಹೆಸರುವಾಸಿಯಾಗಿರುವ ಮ್ಯಾಜಿಶಿಯನ್ ಸ್ಟೀವ್ ಫರೇನಿ, ಲಂಡನ್ ನಗರದಲ್ಲಿ ಹರಿಯುವ ಥೇಮ್ಸ್ ನದಿಯ ಮೇಲೆ ನಡೆಯುತ್ತಿದ್ದಾನೆ. ಈಚೆ ದಡದಿಂದ ಆರಂಭಿಸಿ ಆಚೆ ದಡದಲ್ಲಿನ ಹೌಸ್ ಆಫ್ ಪಾರ್ಲಿಮೆಂಟ್ ಕಡೆ ನಡೆಯುತ್ತಿರುವಾಗ